ನೋಟಿಸ್.

ತಾರೀಖು 27ನೇ ಫಿಬ್ರವರಿ 1895.

ಬೆಂಗಳೂರು ಮನವಾರ್ತೆಪ್ಯಾಟೆ ವಾಸಸ್ಥನಾದ ಹಕೀಂ ಮಹಮ್ಮದ್ ಇಸೂಫ್‌ಸಾಹೆಬ್ ಎಂಬುವರ ನಿಕಾ ಹೆಂಡತಿಯಾದ ಇಮಾಂಬಿ ಯಂಬುವಳು 1895ನೇ ಇಸವಿ ಫೆಬ್ರವರಿ ಮಾಹೆ 17ನೇ ತಾರೀಖು ಭಾನುವಾರದ ರಾತ್ರಿ 10 ಘಂಟೆ ಮೇಲೆ ಬೆಳಗಿನ 6 ಘಂಟೆ ವಳಗಾಗಿ ಈ ಕೆಳಗೆ ನಮೂದಿಸಲ್ಪಟ್ಟ ಹುಡುಗಯರನ್ನು ಮತ್ತು ಸುಮಾರು ಆರುನೂವಿರ ರೂಪಾಯಿ ಕ್ರಯಬಾಳತಕ್ಕ ಬೆಳ್ಳಿ ಭಂಗಾರದ ವಡವೆಗಳನ್ನು ನೋಟುಗಳನ್ನು ಕಳವು ಮಾಡಿಕೊಂಡು ಯಲ್ಲಿಯೋ ಹೋಗಿರುತ್ತಾಳೆಂದು ಫಿರ್ಯಾದ್ ಆಗಿರುವ ಸಂಗತಿಯಲ್ಲಿ ಪತ್ತೆ ಮಾಡುವದಕ್ಕೆ ಸರಿಯಾದ ಬಾತ್ಮಿ ಕೊಟ್ಟವರಿಗೆ 300 ರೂಪಾಯಿಗಳ ಇನಾಮನ್ನು ಕೊಡಲು ಫಿರ್ಯಾದಿ ಹಕೀಂ ಮಹಮ್ಮದ್ ಇಸೂಫ್ ಸಾಹೆಬರು ವಪ್ಪಿರುತ್ತಾರೆ.

1ನೇ ಇಮಾಂಬಿ ಎಂಬುವಳ ಚಹರೆಪಟ್ಟಿ.

ಮಹಮ್ಮದ್ ಇಸೂಫ್ ಸಾಹೆಬರವರ 2ನೇ ನಿಕಾ ಹೆಂಡತಿ—45 ವರುಷ ವಯಸ್ಸು ಕೆಂಪು ಬಣ್ಣ ಕುಳ್ಳಗೆ ದಪ್ಪವಾಗಿದ್ದಾಳೆ ಸುಮಾರು 5 ಅಡಿ ಎತ್ತರ ಹಣೆ ಮೇಲೆ ಅವರೇಪೇಳೆ ಅಗಲ ಘಾಯದ ಗುರ್ತು ಇದೆ. ಯಡಗಡೆ ಕಿವಿಯು ಹರದುಹೋಗಿ ಪುನಹ ಕೇರಿ ಕೊಂಡು ವೋಟುಗಿ ಕಾಣುತ್ತೆ, ನೋಟಕ್ಕೆ ಕಮ್ಮಿ ವಯಸ್ಸಿನವಳಂತೆ ಕಾಣುತ್ತಾಳೆ ತಲೆಕೂದಲು ನರಚಿಲ್ಲಾ ಕನ್ನಡ, ತೆಲುಗು, ಹಿಂದುಸ್ಥಾನಿ, ತಮಳು ಮಾತನಾಡುತ್ತಾಳೆ ಕೆಲವು ವ್ಯಾಳೆಗಳಲ್ಲಿ ಹಿಂದು ಜನಗಳ ಡ್ರೆಸ್ಸುಗಳನ್ನು ದರಿಸಿಕೊಳ್ಳುತ್ತಾಳೆ, ಈಕೆಯು ದಂಡಿನೆಲ್ಲಿ ಮಿಠಾಯಿ ಅಂಗಡಿ ಇಟ್ಟಿದ್ದ ಖಾದರ್‌ಸಾಬ್ ಯಂಬುವನ ಮದುವೆಯಾದ ಹೆಂಡತಿಯಾಗಿದ್ದಳು, ಈತನು ಸುಮಾರು 30 ವರುಷದ ಹಿಂದೆ ಮೃತಪಟ್ಟು ಹೋದನು, ಈತನ ನಂತರ ಹಿಂದುಸ್ಥಾನಿ ಸೈಯದ್ ಇನಾಯತ್ ಅಲ್ಲಿ ಯಂಬುವನು ಇವಳನ್ನು ಯರಡು ಮೂರು ವರುಷ ಮಡಗಿಕೊಂಡಿದ್ದನು. ನಂತರ ಇವನು ಸತ್ತು ಹೋದನು. ತರುವಾಯ ಹಕೀಂ ಮಹಮ್ಮದ್ ಇಸೂಫ್ ಸಾಹೆಬರು ನಿಕಾಮಾಡಿಕ್ಕೊಂಡು ಆ ಲಾಗಾಯತು ಮನೆಯಲ್ಲಿ ಇಟ್ಟುಕೊಂಡು ಇದ್ದರು. ಇವಳಿಗೆ 1—2ನೇ ಗಂಡಂದರಿಗಾಗಲಿ ಅಥವಾ ಇಸೂಫ್ ಸಾಹೆಬರವರಿಗೆ ಆಗಲಿ ಮಕ್ಕಳು ಹುಟ್ಟಲಿಲ್ಲ, ಮತ್ತು ಮಕ್ಕಳೇ ಆಗಿಲ್ಲ. ಈಕೆಯು ಹಕೀಂ ಮಹಮ್ಮದ್ ಇಸೂಫ್ ಸಾಹೆಬರವರ ಮನೆಯಲ್ಲಿರುವಾಗ್ಯೆ ಹೈದರಾಬಾದಿಗೆ ಹೋಗಿ ವಾಸಮಾಡಬೇಕೆಂದು ಆಗಾಗ್ಯೆ ಹೇಳುತ್ತಿದ್ದಳು.

2ನೇ ಸೈದಾಬಿ ಅಡ್ಡಹೆಸರು "ಮನ್ನಿಯ" ಎಂಬುವಳ ಚಹರೆಪಟ್ಟಿ.

ಈಕೆಯು ಹಕೀಂ ಮಹಮ್ಮದ್ ಇಸೂಫ್ ಸಾಹೆಬರಿಗೆ ಸೊಸೆ, ಇವರ ಹಿರೆ ಹೆಂಡತಿಯ 2ನೇ ಮಗನಾದ ಮಹಮ್ಮದ್‌ಖಾಸಿಂ ಎಂಬವನ ಹೆಂಡತಿ. ಸುಮಾರು 12—13 ವರುಷ ವಯಸ್ಸು ಕೆಂಪು ಬಣ್ಣ ಮುಖದ ಮೇಲೆ ಸುಮಾರಾಗಿ ಕಿಡಬಿನ ಗುರ್ತಿದೆ ಗುಂಡು ಮುಖ ಕುಳ್ಳಾಗಿದ್ದಾಳೆ—ಬೆಳವಿಗೆ ಹುಡಗಿಯಾಗಿದ್ದಾಳೆ, ಈ ಹುಡಗಿಯು ತಂದೆ ತಾಯಿಗಳು ಬೆಂಗಳೂರು ತಾಲ್ಲೂಕು ಪರಪನಗರವೆಂಬ ಗ್ರಾಮದಲ್ಲಿ ವಾಸವಾಗಿದ್ದಾರೆ, ತಂದೆ ಹೆಸರು ಸೈಯದ್ ಹಸೆ, ಹುಡುಗಿ ಮನೆಬಿಟ್ಟು ಹೋಗುವಾಗ್ಯೆ ರುತುಮತಿಯಾಗಿರಲಿಲ್ಲ ನೋಡಿದರೆ ದೊಡ್ಡವಳಾದ ಹಾಗೆ ಕಾಣುತ್ತಾಳೆ, ಕನ್ನಡ, ತೆಲುಗು, ಹಿಂದುಸ್ಥಾನಿ ಮಾತನಾಡುತ್ತಾಳೆ.

3ನೇ ಖಮರು ಎಂಬುವಳ ಚಹರೆಪಟ್ಟಿ.

ಇವಳು ತಂದೆತಾಯಿ ಇಲ್ಲದ ಪರದೇಶಿ ಹುಡುಗಿಯು, ಇವಳನ್ನ ಹಕೀಂ ಮಹಮ್ಮದ್ ಇಸೂಫ್ ಸಾಹೆಬರು ಸಾಕಿಕೊಂಡಿದ್ದರು ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಳು, ವಯಸ್ಸು 10 ವರುಷ, ಯಣಗೆಂಪು, ತೆಳ್ಳಗೆ ಇದ್ದಾಳೆ ಕೋಲು ಮುಖ ಹಿಂದಗಡೆ ಕೂದಲು ಕತ್ತರಿಸಿದೆ, ಸೊಂಟದಲ್ಲಿ ಹುಣಿನಕಳೆ ಬೆಳ್ಳಗೆ ಕಾಣುತ್ತೆ, ತೆಲಗು, ಕನ್ನಡ, ಹಿಂದುಸ್ಥಾನಿ ಮಾತನಾಡುತ್ತಾಳೆ, ಇವಳನ್ನು 2 ವರುಷದ ಕೆಳಗೆ ವಾಗಟಪ್ಪ ವೈರೆ ಜನರು ಜೋರಿಮಾಡಿಕೊಂಡು ಹೋಗಿದ್ದರು, ನಂತರ ಹುಡಿಗಿಯು ಕೋಲಾರದಲ್ಲಿ ಸಿಕ್ಕಿ ತಪ್ಪಿತಸ್ತರು ನ್ಯಾಯಕ್ಕೆ ಗುರಿಮಾಡಲ್ಪಟ್ಟರು.

ಎಸ್. ನರಸಿಂಹಯ್ಯಂಗಾರ್,
ಫಾರ್ ಸೂಪರ್‌ಟೆಂಡೆಂಟ್ ಆಫ್ ಪೊಲೀಸ್.

ಹಾಸನ ಡಿಸ್ಟ್ರಿಕ್ಟ್.

ಹಾಸನ ಡಿಸ್ಟ್ರಿಕ್ಟ್—ಇದರಲ್ಲಿ ನಮೂದಾಗುವ ಸಬ್ ರಿಜಿಸ್ಟ್ರಾರ್ ಆಫಿಸುಗಳಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತೈವಜುಗಳನ್ನು ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ಆಫಿಸುಗಳಲ್ಲಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಕಪಡಿಸಲ್ಪಡುತ್ತೆ.